
# ಭೀಮ ಪತ್ರಿಕೆ

ಸಂಚಿಕೆ : ಮಾರ್ಚ್ 2021

## ಲಸಿಕೆ - ಕೊರೊನಾ ಅಂತ್ಯದ ಆರಂಭವೇ?

### ಲಸಿಕೆ ತೆಗೆದುಕೊಂಡಾಗ ಏನಾಗುತ್ತದೆ?

ಮೊದಲನೇ ಡೋಸ್ ತೆಗೆದುಕೊಂಡಾಗ ಜ್ವರ, ಶೀತ, ನೆಗಡಿ ಇತ್ಯಾದಿ ಬರಬಹುದು. ಎರಡನೇ ಡೋಸ್ ತೆಗೆದುಕೊಂಡಾಗ ಇವು ಅಷ್ಟಾಗಿ ಇರುವುದಿಲ್ಲ. ಆದರೆ ಮೊದಲನೇ ಮತ್ತು ಎರಡನೇ ಡೋಸ್ ತೆಗೆದುಕೊಳ್ಳುವ ಮಧ್ಯದ ಸಮಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು.



### ಇದನ್ನು ಯಾರು ತೆಗೆದುಕೊಳ್ಳಬಹುದು?

ಈಗ 65 ವರ್ಷಕ್ಕಿಂತ ಮೇಲ್ಪಟ್ಟವರು ಮಾತ್ರ ತೆಗೆದುಕೊಳ್ಳಬಹುದು. ಮತ್ತು ಈ ಲಸಿಕೆಯನ್ನು ಈಗ 18 ವರ್ಷಕ್ಕಿಂತ ಕೆಳಗಿನವರು ತೆಗೆದುಕೊಳ್ಳುವಂತಿಲ್ಲ.

### ಲಸಿಕೆಯಿಂದ ಕೋವಿಡ್ 19 ಬರುವುದಿಲ್ಲವಾ?

2 ಡೋಸ್ ಲಸಿಕೆ ತೆಗೆದುಕೊಂಡ ನಂತರವೂ ಕೋವಿಡ್ 19ರ ಸೋಂಕು ಉಂಟಾಗಬಹುದು. ಆದರೆ ಅದರ ಪರಿಣಾಮ ಕಡಿಮೆ ಇರುತ್ತದೆ. ಅಂದರೆ ಲಸಿಕೆ ತೆಗೆದುಕೊಳ್ಳದೆ ಇರುವವರಿಗಿಂತ ತೆಗೆದುಕೊಂಡವರು ಅತಿ ಬೇಗ ಗುಣಮುಖರಾಗುತ್ತಾರೆ. ಲಸಿಕೆಯಿಂದ ದೇಹದಲ್ಲಿ ರೋಗದ ವಿರುದ್ಧ ಹೋರಾಡುವ ರೋಗನಿರೋಧಕ ಶಕ್ತಿ ಜಾಸ್ತಿ ಆಗುವುದರಿಂದ ರೋಗಿಗಳು ಈ ರೋಗದ ವಿರುದ್ಧ ಸಮರ್ಥವಾಗಿ ಹೋರಾಡಲು ಸಾಧ್ಯವಾಗುತ್ತದೆ. ಅಂತವರಲ್ಲಿ ಸಾವು ಸಂಭವಿಸುವ ಪ್ರಮಾಣವು ಗಣನೀಯ ಮಟ್ಟದಲ್ಲಿ ಕಡಿಮೆ ಇರುತ್ತದೆ.

### ಭಾರತದಲ್ಲಿ 2 ವಿಧದ ಲಸಿಕೆಗಳು ಲಭ್ಯವಿವೆ.

**1. ಕೋವಿಶೀಲ್ಡ್:**
ಇದನ್ನು ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಹಾಗೂ ಸ್ವೀಡನ್ನಿನ ಆಸ್ಟ್ರಾಜೆನೆಕಾ ಸೇರಿ ಅಭಿವೃದ್ಧಿಪಡಿಸಿದ್ದು, ಭಾರತದ ಸಿರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಇದನ್ನು ತಯಾರಿಸುತ್ತಿದೆ.

**2. ಕೋವ್ಯಾಕ್ಸಿನ್:**
ಇದನ್ನು ಭಾರತ ಸರ್ಕಾರದ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಮತ್ತು ಭಾರತ ಬಯೋಟೆಕ್ ಜಂಟಿಯಾಗಿ ಅಭಿವೃದ್ಧಿಪಡಿಸಿದ್ದಾರೆ.

## ‘ಭೀಮ ಸಂಘ’

### ಪ್ರಾರಂಭ ಯಾವಾಗ?

1990ರ ಏಪ್ರಿಲ್ 30 ರಂದು ಕರ್ನಾಟಕದಾದ್ಯಂತ 500ಕ್ಕೂ ಹೆಚ್ಚು ದುಡಿಯುವ ಮಕ್ಕಳು ಸಂಘಟನೆಯಲ್ಲಿ ಶಕ್ತಿ ಇದೆ ಎಂದು ತಿಳಿದು ‘ಭೀಮ ಸಂಘ’ ಕಟ್ಟಿದೆವು.

### ‘ಭೀಮ ಸಂಘ’ ಎಂಬ ಹೆಸರು ಯಾಕೆ?

ಮಹಾಭಾರತದಲ್ಲಿ ಭೀಮ ನೂರು ಆನೆಗಳಷ್ಟು ಶಕ್ತಿಯುಳ್ಳವನು. ಆದರೆ ಯಾರೂ ಅವನ ಶಕ್ತಿಯನ್ನು ಗುರುತಿಸುವುದಿಲ್ಲ. ನಾವು ಭಾರತದಲ್ಲಿ 115 ಮಿಲಿಯನ್ ದುಡಿಯುವ ಮಕ್ಕಳಿದ್ದರೂ ನಮ್ಮನ್ನು ಯಾರೂ ಗುರುತಿಸುವುದಿಲ್ಲ. ನಮ್ಮ ಸಂಘಕ್ಕೆ ಇರುವ 100 ಆನೆಯಷ್ಟು ಬಲವನ್ನು ಸಮಾಜ ಗುರುತಿಸಲಿ ಎಂದು ‘ಭೀಮ ಸಂಘ’ ಎಂಬ ಹೆಸರು ಆಯ್ಕೆ ಮಾಡಿಕೊಂಡೆವು.

### ಚಿಹ್ನೆ ಏನು ಹೇಳುತ್ತದೆ?

**ಮರಿ ಆನೆ:** ಆನೆ ಸಂಘ ಜೀವಿ, ಸೂಕ್ಷ್ಮಮತಿ ಮತ್ತು ಸಾಧು. ನಾವೂ ಹಾಗೇ.

**ನಕ್ಷತ್ರ:** ಕಗ್ಗತ್ತಲಲ್ಲೂ ಹೊಳೆಯುತ್ತ ಬೆಳಕು ತೋರುತ್ತದೆ. ನಾವೂ ನಮ್ಮ ಜೀವನವನ್ನು ಚೆನ್ನಾಗಿ ಮಾಡಿಕೊಂಡು ಉಳಿದ ದುಡಿಯುವ ಮಕ್ಕಳಿಗೂ ಅವರ ಜೀವನ ರೂಪಿಸಿಕೊಳ್ಳಲು ಸಹಕಾರ ನೀಡುತ್ತೇವೆ.

**ಹರಿಗೋಲು:** ‘ಭೀಮ ಸಂಘ’ದಲ್ಲಿ ಅಂಗವಿಕಲ ಮಕ್ಕಳೂ ಸೇರಿದಂತೆ ಎಲ್ಲ ಮಕ್ಕಳು ಯಾವುದೇ ತಾರತಮ್ಯವಿಲ್ಲದೆ ಜೊತೆಗೆ ಬರಬಹುದು ಮತ್ತು ಸದಸ್ಯರಾಗಬಹುದು.

## ರಿಗೆ: ಭೀಮ

ಪ್ರೀತಿಯ ಭೀಮ,

ನಾನು ಆಕಾಶ್, ಬೆಳಗಾಂವ್‌ನ ಒಟಮೋರಿ ಊರಿನವನು. ಲಾಕ್ಡೌನ್ ಶುರುವಾದ ಈ ಒಂದು ವರ್ಷದಲ್ಲಿ ನಮ್ಮ ಕಷ್ಟದ ಪರಿಸ್ಥಿತಿಯ ಬಗ್ಗೆ ನಿಮ್ಮತ್ರ ಇಲ್ಲಿ ಹೇಳ್ತಾ ಇದ್ದೇನೆ. ನನ್ನಪ್ಪ ಶೆಟ್ಟಪ್ಪರಿಗೆ 4 ವರ್ಷಗಳ ಹಿಂದೆ ಕಾರವಾರದ ಸಕಲಮಕ್ಕೇರಿಯಲ್ಲಿ ಕಟ್ಟಡ ನಿರ್ಮಾಣದ ಕೆಲಸ ಸಿಕ್ಕಾಗ ನಾವೆಲ್ಲರೂ ಅಲ್ಲಿಗೆ ಹೋದ್ವಿ, ಹೊಸ ಪರಿಸರ ಆದರೂ, ಅದಕ್ಕೆ ಹೊಂದಿಕೊಳ್ಳಲಿಕ್ಕೆ ಹೆಚ್ಚು ದಿನ ಆಗ್ಲಿಲ್ಲ. ಹಾಗೆ ಕಳೆದ ವರ್ಷ ಮಾರ್ಚ್‌ನಲ್ಲಿ ಕೊರೊನಾ ಅಂತ ಲಾಕ್ಡೌನ್ ಮಾಡಿದ್ರಲ್ಲ, ಆಗ ಫಸ್ಟ್, ಫಸ್ಟ್ ಶಾಲೆ ಇಲ್ಲ, ಪರೀಕ್ಷೆ ಇಲ್ಲ. ಟೀಚರ್, ಮಾಸ್ಟ್ರಿಂದ ಬಡಿಗೆ ತಿನ್ನೋದು ಯಾವುದೂ ಇಲ್ಲ ಅಂತ ನಂಗಂತೂ ಭಾರೀ ಖುಷಿ ಆಯ್ತು. ಮನೆಯಲ್ಲಿ ಕೆಲ್ಸ ಮಾಡಿ ಸಂಬಳ ಸಿಗೋದಂದ್ರೆ ಅಪ್ಪಂಗೆ ಮಾತ್ರ. ಲಾಕ್ಡೌನ್‌ನಿಂದ ಅವ್ರಿಗೆ ಯಾವುದೇ ಕೆಲ್ಸ ಇರ್ಲಿಲ್ಲ. ಇನ್ನೊಂದು ಲಾಕ್ಡೌನ್ ಶುರುವಾದಾಗ, ಈ ಹಿಂದೆ ಅಪ್ಪ-ಅಮ್ಮ ಉಳಿಸಿದ ಹಣದಲ್ಲಿ ಹೇಗೋ ಸ್ವಲ್ಪ ದಿನ ನಡೀತು. ಇದೆಲ್ಲಾ ಬಿಟ್ಟು ನಮ್ಮೂರಿಗೆ ಹೋಗ್ವ ಅಂದ್ರೂ ಬಸ್ಸಾಗಲಿ, ಟ್ರೇನಾಗಲಿ ಇರಲಿಲ್ಲ. ಅಕ್ಕಿ, ತರಕಾರಿ, ಬೇಳೆ ಇಲ್ಲದೇ ಒಂದು ಹೊತ್ತಿನ ಊಟಕ್ಕೂ ತುಂಬಾ ತೊಂದ್ರೆ ಆಯ್ತು. ಹೀಗಿರುವಾಗ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್(ಸಿ.ಡಬ್ಲ್ಯೂ.ಸಿ.) ಸಂಸ್ಥೆಯವರಿಗೆ ನಮ್ಮ ಪರಿಸ್ಥಿತಿ ಗೊತ್ತಾಗಿ, ನನ್ನೊಂದಿಗೆ ಮಾತನಾಡಿದಾಗ ನಮ್ಮ ಸುತ್ತಮುತ್ತ ಎಷ್ಟು ಜನ ಲಾಕ್ಡೌನ್‌ನಿಂದ ತೊಂದ್ರೆ ಅನುಭವಿಸ್ತಿದ್ದಾರೆ ಅಂತ ನಾನು ಒಟ್ಟಾಕಿದ ಮಾಹಿತಿಯನ್ನು ಅವರಿಗೆ ನೀಡಿದೆ. ನಮ್ಮ ಕುಟುಂಬದವರನ್ನೂ ಸೇರಿಸಿ ಮಕ್ಕಳು ಮತ್ತು ದೊಡ್ಡವರು ಸೇರಿದಂತೆ ಒಟ್ಟು 23 ಜನರಿಗೆ ತೊಂದ್ರೆ ಇತ್ತು. ಈ ಮಾಹಿತಿಯ ಆಧಾರದಲ್ಲಿ ಸಿಡಬ್ಲ್ಯೂಸಿ ಸಹಾಯದಿಂದ ಶಿರವಾಡ ಗ್ರಾಮ ಪಂಚಾಯತ್ ಅಧ್ಯಕ್ಷರೊಂದಿಗೆ ಮಾತಾಡಿ ನಮ್ಮ ಎಲ್ಲಾ 5 ಕುಟುಂಬಗಳಿಗೆ ಅಗತ್ಯವಾಗಿ ಬೇಕಾದ ಅಕ್ಕಿ, ಬೇಳೆ, ಸಾಬೂನು, ಚಾಹುಡಿ, ಎಣ್ಣೆ, ಎಲ್ಲವನ್ನೂ ಪಡೆದುಕೊಳ್ಳಲು ಸಾಧ್ಯ ಆಯ್ತು. ಇವಷ್ಟೇ ಅಲ್ಲದೇ ನಮ್ಮವರಲ್ಲಿ ಯಾರತ್ರ ರೇಶನ್ ಕಾರ್ಡ್ ಇತ್ತೋ ಅವರನ್ನೆಲ್ಲಾ ಅಪ್ಪ ಮತ್ತು ನಾನು ಗ್ರಾಮ ಪಂಚಾಯಿತಿಗೆ ಕರ್ಕೊಂಡು ಹೋಗಿ ಪಡಿತರ ಸಿಗುವ ಹಾಗೆ ಮಾಡಿದ್ವಿ. ಸರ್ಕಾರದಿಂದ ಆಹಾರ ಪಡೆದುಕೊಳ್ಳಲು ಇದ್ದ ಸಹಾಯವಾಣಿ(155214)ಗೆ ಸುಮಾರು ಸಲ ಫೋನ್ ಮಾಡಿದ್ರೂ ಅದ್ರಿಂದ ಏನೂ ಸಿಗ್ಲಿಲ್ಲ. ಲಾಕ್ಡೌನ್ ಮುಗಿದು ಬಸ್ ಶುರು ಆದ್ಮೇಲೆ ನಾವೆಲ್ಲ ನಮ್ಮೂರಿಗೆ ವಾಪಾಸ್ ಬಂದ್ವಿ. ಈಗ ನಮ್ಮ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ. ನಾನು ಕೂಡ ಈ ರೀತಿ ಜನರಿಗೆ ಸಹಾಯ ಮಾಡಬಹುದು ಅಂತ ಎಣಿಸಿರಲಿಲ್ಲ. ಆದರೆ ನಾನೂ ಏನೋ ಬದಲಾವಣೆ ಮಾಡಿದ್ದೀನಿ ಎನ್ನುವ ಖುಷಿ ಇದೆ.

## ‘ಪರ್ಸಿವಿಯರೆನ್ಸ್ ರೋವರ್’ ಏನಿದು?


ಮಂಗಳ ಗ್ರಹಕ್ಕೆ ಅಮೇರಿಕಾದ ನಾಸಾ ಬಾಹ್ಯಾಕಾಶ ಸಂಸ್ಥೆ ಕಳುಹಿಸಿರುವ ಯಂತ್ರ ಅಥವಾ ರೋಬೋಟ್ ವಾಹನ.


### ಇದು ಏನು ಮಾಡುತ್ತದೆ?

ಮಂಗಳ ಗ್ರಹದಲ್ಲಿ ಯಾವುದಾದರೂ ಜೀವಿಗಳು ಇವೆಯೇ ಅಥವಾ ಮೊದಲು ಇದ್ದವೇ ಎಂದು ಹುಡುಕುತ್ತದೆ. ಹಾಗೂ ಅಲ್ಲಿರುವ ಕಲ್ಲು ಮತ್ತು ಮಣ್ಣುಗಳ ಮಾದರಿಯನ್ನು ಮುಂದಿನ ಸಂಶೋಧನೆಗಾಗಿ ಒಟ್ಟು ಹಾಕುತ್ತದೆ. ಮತ್ತು ಮಂಗಳ ಗ್ರಹದ ನೆಲದ(ಮೇಲ್ಮೈನ) 3D ಚಿತ್ರವನ್ನು ಆಗಾಗ ಕಳುಹಿಸುತ್ತಿರುತ್ತದೆ.

### ಯಾವಾಗ?

ಈ ಪರ್ಸಿವಿಯರೆನ್ಸ್ ವಾಹನವು ಚಿಕ್ಕ ಕಾರಿನಷ್ಟಿದ್ದು ಅದನ್ನು ಒಂದು ರಾಕೆಟ್ ಮುಖಾಂತರ 2020ರ ಜುಲೈ 30ರಂದು ಅಮೆರಿಕಾದಿಂದ ಕಳುಹಿಸಲಾಗಿದೆ. ಇದು 2021ರ ಫೆಬ್ರವರಿ 18ರಂದು ಮಂಗಳಗ್ರಹವನ್ನು ತಲುಪಿತು. ಅಂದರೆ ಇದು 203 ದಿನಗಳಲ್ಲಿ 47 ಕೋಟಿ 20 ಲಕ್ಷ (47,20,00,000) ಕಿಲೋಮೀಟರ್ ಪ್ರಯಾಣಿಸಿದೆ.





“ಜನ ಹೆಣ್ಣು ಮಕ್ಕಳನ್ನು ಚುಡಾಯಿಸುತ್ತಿದ್ದಾರೆ, ಕುಡಿದು ಬಂದು ಗಲಾಟೆ ಮಾಡುತ್ತಿದ್ದಾರೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಮಕ್ಕಳಿಗೆ ಇಂತಹ ಸಮಸ್ಯೆಗಳು ಎದುರಾದಲ್ಲಿ, ಹಿಂಜರಿಕೆ ಇಲ್ಲದೇ ನನಗೆ ಫೋನ್ ಮಾಡಿದರೆ ನಾನು ತಕ್ಷಣ ಕ್ರಮಕೈಗೊಳ್ಳಲು ಸಿದ್ಧನಿದ್ದೇನೆ.”

ಶ್ರೀ ಶ್ರೀಕಾಂತ್ - ಪೊಲೀಸ್ ಉಪಾಧೀಕ್ಷಕರು, ಕುಂದಾಪುರ ವಿಭಾಗ

**9480805422**

ಭೀಮ: ಆಕಾಶ್, ನಿಮ್ಮ ಪರಿಸ್ಥಿತಿ ಈಗ ಸುಧಾರಿಸಿದೆ ಅಂತ ಕೇಳಿ ತುಂಬಾ ಸಂತೋಷ ಆಯ್ತು. ಆದಷ್ಟು ಬೇಗ ಇನ್ನೂ ಒಳ್ಳೆದಾಗಲಿ ಅಂತ ಹಾರೈಸುತ್ತೇನೆ. ಇದರಿಂದ ಎಲ್ಲ ಮಕ್ಕಳಿಗೂ ಸ್ಫೂರ್ತಿ ಸಿಗಲಿ.
ಇದೇ ರೀತಿ ನಿಮಗೆ ಯಾವುದಾದರೂ ಸಮಸ್ಯೆಗಳಿದ್ದರೆ, ಏನಾದರೂ ಹೇಳಬೇಕಾದರೆ, ಮಾಹಿತಿ ಬೇಕಾದರೆ ನಮಗೆ ತಿಳಿಸಿ.

**8105247409**

THE CONCERNED FOR Working Children
40 FOUR DECADES IN PARTNERSHIP WITH CHILDREN